ಬಿಡುಗಡೆಗೆ ಸಿದ್ಧವಾಗಿವೆ.

‘ಒಂದು ವಿಷಯದಲ್ಲಿ ನಾನು ತುಂಬ ಲಕ್ಕಿ. ಮೊದಲಿನಿಂದಲೂ ನನಗೆ ತುಂಬ ಭಿನ್ನ ರೀತಿಯ ಪಾತ್ರಗಳು ಅರಸಿಕೊಂಡು ಬಂದಿವೆ. ತುಂಬ ಜನರಿಗೆ ಬೇರೆ ಬೇರೆ ರೀತಿಯ ಪಾತ್ರಗಳಲ್ಲಿ ಕಾಣಿಸಿಕೊಳ್ಳಬೇಕು ಎಂಬ ಆಸೆ ಇರುತ್ತದೆ. ಆದರೆ ಅವಕಾಶ ಸಿಗುವುದಿಲ್ಲ. ನನ್ನ ವಿಷಯದಲ್ಲಿ ಹಾಗಾಗಿಲ್ಲ’ ಎನ್ನುವ ಅಮೃತಾ, ನಿರ್ದೇಶಕರಿಂದೊಂದೊಂದು ನುಡಿ ಕಲಿತು ಬೆಳೆಯುತ್ತಿರುವವರು.

‘ಡಾರ್ಲಿಂಗ್ ಕೃಷ್ಣ ಅವರಿಂದ ಸಮಯಪ್ರಜ್ಞೆ ಕಲಿತೆ. ಸೂರಿ ಕಲಾವಿದರಿಗೆ ಸವಾಲು ಹಾಕುತ್ತಾರೆ. ಈ ಕ್ಷಣದಲ್ಲಿ ನಕ್ಕರೆ ಇನ್ನೊಂದು ಕ್ಷಣದಲ್ಲಿ ಅಳಬೇಕು. ಅವರು ಚಿತ್ರೀಕರಣಕ್ಕೆ ಆಯ್ಕೆ ಮಾಡಿಕೊಂಡ ಸ್ಥಳಗಳಿಗೆ ನಾನು ಬಹುಶಃ ನನ್ನ ಜೀವಮಾನದಲ್ಲೇ ಹೋಗಲಾರೆ. ಇತ್ತೀಚೆಗೆ ನಾನು ನಟಿಸಿದ ‘ಬಡವ ರ್‍ಯಾಸ್ಕಲ್’ ಸಿನಿಮಾ ನಿರ್ದೇಶಕ ಶಂಕರ್ ಮೊದಲು ಡೆಲಿವರಿ ಬಾಯ್ ಆಗಿ ಕೆಲಸ ಮಾಡಿದವರು. ಅವರು ಬರೆಯುವ ಒಂದೊಂದು ಡೈಲಾಗ್ ಕೂಡ ಒಂದೊಂದು ಪಾಠದಂತಿವೆ. ಹೀಗೆ ನಾನು ಕೆಲಸ ಮಾಡಿದ ನಿರ್ದೇಶಕರಿಂದೆಲ್ಲ ನಾನು ಸಾಕಷ್ಟು ಕಲಿಯುತ್ತ ಬಂದಿದ್ದೇನೆ’ ಎನ್ನುವ ಅಮೃತಾ ಪಾತ್ರಕ್ಕಾಗಿ ವಿಶೇಷ ಸಿದ್ಧತೆಯನ್ನೇನೂ ಮಾಡಿಕೊಳ್ಳುವುದಿಲ್ಲ. ‘ಹಾಗೆ ನೋಡಿದರೆ ನನಗೆ ಈವರೆಗೆ ಸಿಕ್ಕ ಯಾವ ನಿರ್ದೇಶಕರೂ ಆ್ಯಕ್ಟ್ ಮಾಡು ಎಂದು ನನ್ನನ್ನು ಕೇಳಿಲ್ಲ. ಆ್ಯಕ್ಟ್ ಮಾಡಬೇಡಿ, ರಿಯಾಕ್ಟ್ ಮಾಡಿ ಸಾಕು ಎಂದೇ ಹೇಳಿದ್ದಾರೆ. ಹಾಗಾಗಿಯೇ ನಾನು ಸಹಜವಾಗಿ ನಟಿಸುತ್ತೇನೆ’ ಎಂದವರು ವಿವರಿಸುತ್ತಾರೆ.

ಅಮೃತಾಗೆ ಹಿಂದಿಯ ‘ಬರ್ಫಿ’ ಥರದ ಸಿನಿಮಾದಲ್ಲಿ ನಟಿಸಬೇಕು ಎಂಬ ಆಸೆ ಇದೆ. ಅಂಥ ಅವಕಾಶ ಒಂದಲ್ಲ ಒಂದು ದಿನ ಬಂದೇ ಬರುತ್ತದೆ ಎಂಬ ನಂಬಿಕೆಯೂ ಅವರಿಗಿದೆ. ಲಾಕ್‌ಡೌನ್‌ಗಿಂತ ಮೊದಲು ಮೂರು ಕತೆಗಳನ್ನು ಅವರು ಕೇಳಿದ್ದು, ಅವು ಚರ್ಚೆಯ ಹಂತದಲ್ಲಿವೆ. ಸಾಮಾನ್ಯವಾಗಿ ಮುಖಾಮುಖಿ ಭೇಟಿಯಾಗಿಯೇ ಕಥೆಯನ್ನು ಕೇಳುವ ಅವರು ಕೊರೊನಾ ಸಂಕಷ್ಟದ ಕಾಲ ಮುಗಿದ ನಂತರ ಮತ್ತಷ್ಟು ಕಥೆಗಳನ್ನು ಕೇಳಲು ನಿರ್ಧರಿಸಿದ್ದಾರೆ.

‘ಎಲ್ಲ ಕಷ್ಟಗಳು ಮುಗಿದು ತಿಳಿಯಾಗಲು ಸಾಕಷ್ಟು ಸಮಯ ತೆಗೆದುಕೊಳ್ಳಬಹುದು. ಆದರೆ ಅದರ ಬಗ್ಗೆ ನನಗೆ ಚಿಂತೆಯಿಲ್ಲ. ಇದು ನಮ್ಮ ವೃತ್ತಿಬದುಕಿನ ಸಾಧನೆಯ ಬಗ್ಗೆ ಯೋಚಿಸುವ ಸಮಯ ಅಲ್ಲ. ಎಲ್ಲರೂ ಕ್ಷೇಮದಿಂದಿರಲಿ ಎಂದು ಬಯಸುವ ಸಮಯ. ಅದಕ್ಕಾಗಿ ನಮ್ಮ ಕೈಲಿ ಏನು ಸಾಧ್ಯವಿದೆಯೋ ಅದನ್ನು ಮಾಡುವ ಸಮಯ’ ಎನ್ನುವ ಅಮೃತಾ ಮಾತಿನಲ್ಲಿ ಅವರ ವ್ಯಕ್ತಿತ್ವವೂ ಪ್ರತಿಫಲಿತವಾಗುತ್ತದೆ. ■




# ಉಪ್ಪಿ ಜನಸೇವೆ!

ಈ ಬಾರಿಯ ಲಾಕ್‌ಡೌನ್ ಘೋಷಣೆಯಾದ ಸ್ವಲ್ಪೇ ದಿನಗಳಲ್ಲಿ ಉಪೇಂದ್ರ, ಚಿತ್ರರಂಗದ, ಸಾರ್ವಜನಿಕರ ಸೇವೆಗೆ ನಿಂತರು. ತಮ್ಮ ಖಾತೆಯಿಂದ ಒಂದಿಷ್ಟು ಹಣ ತೆಗೆದು ಆಹಾರ, ಮಾಸ್ಕ್ ವಿತರಿಸಿ ಸುಮ್ಮನಾಗಲಿಲ್ಲ. ತಮ್ಮ ಮೇಲಿನ ಜನರ ಅಭಿಮಾನ ಬಳಸಿಕೊಂಡು ಕೆಲಸ ಶುರುಮಾಡಿದರು. ಅಭಿಮಾನಿಗಳಿಂದ ಹಣ ಸಂಗ್ರಹಿಸಿ, ಅದರಿಂದ ಅಗತ್ಯವಸ್ತುಗಳನ್ನು ಖರೀದಿಸಿ ಅಗತ್ಯ ಇರುವವರಿಗೆ ಹಂಚಿದರು. ಸಹಾಯ ಮಾಡಲು ಮುಂದೆ ಬಂದವರ ಜೊತೆ ಫೋಟೊ ತೆಗೆಸಿಕೊಂಡು ಸೋಷಿಯಲ್ ಮಿಡಿಯಾದಲ್ಲಿ ಪ್ರಕಟಿಸಿದರು. ಸ್ಟಾರ್ ನಟನೊಬ್ಬನ ಜೊತೆಗೆ ಸಿಗುವ ಫೋಟೊ ಮತ್ತು ಅವನ ಸೋಷಿಯಲ್ ಮೀಡಿಯಾದಲ್ಲಿ ಪ್ರಕಟಗೊಳ್ಳುವ ಖುಷಿ ಕೊಡುವ ಉತ್ತೇಜನ ಖಂಡಿತ ಸಣ್ಣದಲ್ಲ. ಹೀಗೆ ತಮ್ಮ ಪ್ರಭಾವಳಿಯನ್ನು ಸರಿಯಾದ ಸಮಯಕ್ಕೆ, ಬಳಸಿಕೊಂಡ ಉಪೇಂದ್ರ ಅವರ ಮಾದರಿ ಖಂಡಿತ ಸ್ತುತ್ಯರ್ಹ ಮತ್ತು ಉಳಿದ ನಟರಿಗೆ ಅನುಕರಣೀಯ.

ಉಪೇಂದ್ರ ಕರೆಗೆ ಕರ್ನಾಟಕದ ಬೇರೆ ಬೇರೆ ಭಾಗದಿಂದ ಜನ ಸಹಾಯ ಮಾಡಲು ಮುಂದೆ ಬಂದಿದ್ದಾರೆ. ಜನರಿಗೆ ಒಂದು ಕರೆಯ ಉತ್ತೇಜನ ಬೇಕು, ಅದನ್ನು ಆಮಿಷವೆಂದು ಬೇಕಾದರೆ ಕರೆಯಿರಿ. ಆದರೆ ಅದು ಒಳ್ಳೆಯ ಉದ್ದೇಶಕ್ಕಾಗಿ ಒಡ್ಡಿದ ಆಮಿಷ.

ಸೋಷಿಯಲ್ ಮೀಡಿಯಾದಲ್ಲಿ ನಿತ್ಯ ಪರಸ್ಪರ ಕಚ್ಚಾಡುವ ಅಭಿಮಾನಿವರ್ಗಕ್ಕೆ ದರ್ಶನ್, ಯಶ್, ಸುದೀಪ್ ಅವರಂಥ ನಟರು ಸರಿಯಾದ ದಿಶೆಯಲ್ಲಿ ಮಾರ್ಗದರ್ಶನ ಮಾಡಿದರೆ ಖಂಡಿತ ಕೊರೊನಾ ವಿರುದ್ಧ ಸಕಾರಾತ್ಮಕವಾದ ದೊಡ್ಡ ಆಂದೋಲನವನ್ನೇ ಮಾಡಬಹುದು. ಏನೂ ಅಲ್ಲ, ಯಾರಿಗೂ ಗೊತ್ತಿಲ್ಲ, ಆದರೂ ಸಾವಿರಾರು ಜನರು ಈ ಹೋರಾಟದಲ್ಲಿ ಸ್ವಯಂ ಪ್ರೇರಿತರಾಗಿ ಧುಮುಕಿದ್ದಾರೆ. ಅಂದಮೇಲೆ ಒಂದು ಪ್ರಬಲ ಪ್ರೇರಕಶಕ್ತಿ ಸಿಕ್ಕಿದರೆ ಇನ್ನೆಷ್ಟು ಜನ ಈ ಕೆಲಸಕ್ಕೆ ಸಿಗಬಹುದು? ಅವರಿಂದ ಮತ್ತೆಷ್ಟು ಜನರಿಗೆ ಸಹಾಯ ಆಗಬಹುದು ಯೋಚಿಸಿ. ಆದರೆ ಅದಕ್ಕೆ ದೊಡ್ಡಮಟ್ಟದ ಇಚ್ಛಾಶಕ್ತಿ ಮತ್ತು ಸಾಮಾಜಿಕ ಬದ್ಧತೆ ಬೇಕು. ಅದು ಉಳಿದ ನಟರಲ್ಲಿ ಇನ್ನೂ ಜಿನುಗುಹನಿಯಾಗಿ ಹರಿಯುತ್ತಿದೆಯೇ ಹೊರತು ಭೋರ್ಗರೆಯುತ್ತಿಲ್ಲ. ಹೀಗಾಗಿಯೇ ತಮ್ಮ ಅಭಿಮಾನವನ್ನು, ಜನರಿಗೆ ತನ್ನ ಮೇಲಿರುವ ಪ್ರೀತಿಯನ್ನು ಸಮಾಜಸೇವೆಯ ಕಡೆಗೆ ಹರಿಸುತ್ತಿರುವ ಉಪೇಂದ್ರ ಮಾದರಿ ಮೆಚ್ಚುಗೆಗೆ ಅರ್ಹವಾದದ್ದು.

ವಿಷಯ ಅಷ್ಟೇ ಅಲ್ಲ. ಉಪೇಂದ್ರ ಇತ್ತೀಚೆಗೆ ಸೋಷಿಯಲ್ ಮೀಡಿಯಾದಲ್ಲಿ ಬರೆದ ಒಂದು ಬಹಿರಂಗ ಪತ್ರ ಈ ಎಲ್ಲದಕ್ಕೂ ಮತ್ತೊಂದು ಆಯಾಮವನ್ನು ಕೊಟ್ಟಿದೆ. ‘ನಾನು ಉಪೇಂದ್ರ... ಈ ರಾಜ್ಯದ ಮುಖ್ಯಮಂತ್ರಿ (ಸಿಎಂ) ಆಗ್ಬೇಕು... ನಾನು ಚುನಾವಣೆಯಲ್ಲಿ ಸ್ಪರ್ಧಿಸಿದರೆ ನೀವು ನನ್ನನ್ನು ಗೆಲ್ಲಿಸ್ತೀರಾ?’ ಎಂದು ಶುರುವಾಗುವ ಪತ್ರ, ‘ನಿಮ್ಮ ಜೊತೆ ನಾನು ಯಾವಾಗ್ಲೂ ಇರೋ ಪರ್ಮನೆಂಟ್ ಸಿಎಂ (ಕಾಮನ್ ಮ್ಯಾನ್) ಜನ ಸಾಮಾನ್ಯ? ಇಲ್ಲ ಇಲ್ಲ... ಜನ ಅಸಾಮಾನ್ಯರಲ್ಲಿ ಒಬ್ಬನಾಗಿರ್ತೀನಿ ಸರಿನಾ?’ ಎಂದು ಕೊನೆಯಾಗುತ್ತದೆ. ಅವರ ಹಲವು ಟ್ವೀಟ್‌ಗಳು ಪ್ರಜಾಕೀಯದ ಸಿದ್ಧಾಂತವನ್ನು ಹೇಳುತ್ತಿವೆ. ಖಂಡಿತ ತಪ್ಪಲ್ಲ... ಆದರೆ ಇದು ರಾಜಕೀಯ ಅಜೆಂಡಾ ಹೇಳುವ ಸಮಯವೇ? ಒಂದು ಕೈಯಲ್ಲಿ ಅನ್ನದ ಆಸೆ ತೋರಿಸಿ ಇನ್ನೊಂದು ಕೈಯಲ್ಲಿ ರಾಜಕೀಯ ಉದ್ದೇಶದ ಪೊಟ್ಟಣವನ್ನು ಹಿಡಿದುಕೊಂಡಂತಿರುವ ಅವರನ್ನು ಹೇಗೆ ನೋಡಬೇಕು? ಹೇಗೆ ಅರ್ಥಮಾಡಿಕೊಳ್ಳಬೇಕು? ಅವರದೇ ಇನ್ನೊಂದು ಟ್ವೀಟ್ ಹೀಗಿದೆ: ‘ಈಗ ಪ್ರಜಾಕೀಯವನ್ನು ಅನುಮಾನದಿಂದ ನೋಡುತ್ತಿರುವವರು, ಟೀಕಿಸುತ್ತಿರುವವರೂ ಬದಲಾಗುತ್ತಾರೆ. ತುಂಬ ಅನುಮಾನ ಪಡುವವರು, ಸತ್ಯಾಸತ್ಯತೆ ಅಳೆದು ತೂಗಿ ನೋಡುವವರು ಬದಲಾದರೆ ಬಹಳ ಬಲವಾಗಿ ಬದಲಾಗುತ್ತಾರೆ. ನಂತರ ಅವರನ್ನು ಯಾರೂ ಬದಲಾಯಿಸಲಾರರು.’

ನಿಜ. ಇದು ಹಲವರ ಬಣ್ಣ ಬಯಲಾಗಿರುವ, ಸತ್ಯಾಸತ್ಯತೆ ಬೆಳಕಿಗೆ ಬರುತ್ತಿರುವ ಕಾಲ. ಉಪೇಂದ್ರ ಈ ಕಾಲದಲ್ಲಿ ನಿಂತು ಏನೋ ಮಾತಾಡುತ್ತಿದ್ದಾರೆ. ಜನರ ಜೊತೆಗೆ ನಿಂತಿದ್ದಾರೆ. ಅವರ ನಡೆ–ನುಡಿಗಳ ಸತ್ಯಾಸತ್ಯತೆಯನ್ನು ಕಾಲವೇ ಒರೆಗೆ ಹಚ್ಚಲಿದೆ. ■